**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**
**ಕೆ.ಆರ್.ನಗರ.**

**<u>ಸಿ.ಸಿ ನಂಃ 1237 / 2016</u>**

| | | |
|---|---|---|
| ಸಾಕ್ಷಿಯ ಹೆಸರುಃ | ಚಿಂದೇಗೌಡ ಎಮ್.ಎಲ್ | ಫ್ರಾಸಾಃ 8 |
| ತಂದೆ ಹೆಸರುಃ | ಲಕ್ಕೇಗೌಡ | ಚಾಸಾಃ 11 |
| ವಯಸ್ಸುಃ | 67 ವರ್ಷ | ದಿಃ 08.04.2025 |
| ಉದ್ಯೋಗಃ | ನಿವೃತ್ತ ಪೋಲೀಸ್ ಮುಖ್ಯ ಪೇದೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಮೆಳಗೊಡು, ಹಾಸನ | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>**

ನಾನು 2012 ರಿಂದ 2016 ರವರೆಗೆ ಮುಖ್ಯ ಪೇದೆಯಾಗಿ ಸಾಲಿಗ್ರಾಮ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 20.04.2016 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮ. 1-00 ಗಂಟೆಗೆ ಚಾಸಾಃ 1 ರವರು ಠಾಣೆಗೆ ಹಾಜರಾಗಿ ಒಂದು ಲಿಖಿತ ದೂರನ್ನು ಸಲ್ಲಿಸಿದ ಮೇರೆಗೆ ಸದರಿ ದೂರಿನ ಸಾರಾಂಶದ ಮೇರೆಗೆ ನಾನು ಆರೋಪಿಯ ವಿರುದ್ಧ ನಮ್ಮ ಠಾಣಾ ಗುನ್ನೆ ನಂ. 45/16 ರಲ್ಲಿ ಪ್ರಕರಣ ನೊಂದಾಯಿಸಿ ಪ್ರ.ವ. ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಅದೇ ದಿನ ಘಟನಾ ಸ್ಥಳಕ್ಕೆ ಹೋಗಿ ಚಾಸಾಃ5 ಮತ್ತು 6 ರವರ ಸಮಕ್ಷಮದಲ್ಲಿ ಘಟನಾ ಸ್ಥಳದ ಪಂಚನಾಮೆಯನ್ನು ಮಧ್ಯಾಹ್ನ 3-00 ರಿಂದ ಸಂಜೆ 4-00 ಗಂಟೆವರೆಗೆ ಮಾಡಿ ಮುಗಿಸಿರುತ್ತೇನೆ ಹಾಗೂ ಸದರಿ ಪಂಚನಾಮೆಯಡಿಯಲ್ಲಿ ಆರೋಪಿತರು ಬಳಸಿದ ಒಂದು ಹಗ್ಗಮತ್ತು ಮಚ್ಚನ್ನು ಚಾಸಾ-1 ರವರು ಹಾಜರುಪಡಿಸಿದ್ದು ಅದನ್ನು

ನಾನು ಜಪ್ತಿ ಪಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾಃ 2 ರಿಂದ 4 ರವರ ಹೇಳಿಕೆಗಳನ್ನು ಪಡೆದುಕೂಂಡಿರುತ್ತೇನೆ.

ನಂತರ ಠಾಣೆಗೆ ಬಂದು ಜಪ್ತಿಪಡಿಸಿಕೊಂಡ ಮುದ್ದೆಮಾಲುಗಳನ್ನು ವಸ್ತು ಪಟಿಟ ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿರುತ್ತೇನೆ.

ನಂತರ ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನ್ನು ಚಾಸಾಃ12 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಪ್ರ.ವ.ವರದಿಯನ್ನು ನಿಪಿ-7 ಎಂದು, ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು, ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು, ನಿಪಿ-2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಕೆ ಬಿ ವಕೀಲರಿಂದ**

1. ಘಟನೆ ನಡೆದ ಒಂದು ದಿನದ ಬಳಿಕ ಚಾಸಾ-1 ರವರು ತಡವಾಗಿ ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಪಂಚರಾಗಿ ಬರಲು ಚಾಸಾ-5 ಮತ್ತು 6 ರವರಿಗೆ ನಾನು ಲಿಖಿತ ನೋಟೀಸನ್ನು ನೀಡಿರುವುದಿಲ್ಲ. ಘಟನಾ ಸ್ಥಳದ ಅಕ್ಕ-ಪಕ್ಕದ ಮನೆಯವರನ್ನು ಪಂಚರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ.

2. ಮುದ್ದೆ ಮಾಲು 1 ಮತ್ತು 2 ರ ಮೇಲೆ ನಾನು ಪಂಚರ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ. ಮುದ್ದೆ ಮಾಲು 1 ಮತ್ತು 2 ನ್ನು ಜಪ್ತಿ ಪಡಿಸಿದಾಗ ಅದರಲ್ಲಿ ರಕ್ತದ ಕಲೆಗಳು ಇರಲಿಲ್ಲ. ಮುದ್ದೆ ಮಾಲು 1 ಮತ್ತು 2 ನ್ನು ಚಾಸಾ-1 ರವರು ಮನೆ ಬಳಕೆಗಾಗಿ ಇಟ್ಟುಕೊಂಡಿದ್ದು, ಅದನ್ನು ನಾನು ಚಾಸಾ-1 ರವರ ಮನೆಯಿಂದ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ಮತ್ತು 2 ನ್ನು ನಾನು ವೈದ್ಯರ ಮುಂದೆ ಹಾಜರುಪಡಿಸಿರುವುದಿಲ್ಲ.

3. ನಾನು ಈ ಪ್ರಕರಣದಲ್ಲಿ ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ, ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿರುವುದಿಲ್ಲ, ಯಾವುದೇ ಮು.ಮಾಲುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ, ಹಾಗೂ ಯಾವುದೇ

ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನೀಡಿದ ಸುಳ್ಳು ದೂರಿನ ಆಧಾರದ ಮೇಲೆ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**